

ಸಂದರ್ಶನ: ಸಿ.ಜಿ. ಮಂಜುಳಾ

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

## ಲೇಖಕಿ ನೇಮಿಚಂದ್ರ ಜೊತೆ ಮಾತುಕತೆ

# ‘ಕತೆ ಹೇಳುವುದು ಅನಿವಾರ್ಯ ಧರ್ಮ ಮತ್ತು ಕರ್ಮ ನನಗೆ

ನೇಮಿಚಂದ್ರ ಅವರು ಕನ್ನಡ ಸಾಹಿತ್ಯಲೋಕದ ವಿಶಿಷ್ಟ ಲೇಖಕಿ. ಹೆಲಿಕಾಪ್ಟರ್ ಸಂಶೋಧನೆ ಮತ್ತು ವಿನ್ಯಾಸ ವಿಭಾಗದಲ್ಲಿ ಎಂಜಿನಿಯರಿಂಗ್ ವೃತ್ತಿ ನಿರ್ವಹಿಸುತ್ತಲೇ ಸಾಹಿತ್ಯಲೋಕದಲ್ಲಿ ವಿಭಿನ್ನ ಅನುಭವಧಾರೆಗಳನ್ನು ಹರಿಸಿದವರು ಅವರು. ಕಥೆ, ಕಾದಂಬರಿ, ಪ್ರವಾಸ ಕಥನ, ಜೀವನಚರಿತ್ರೆ, ವಿಜ್ಞಾನ ಬರಹ, ಮಹಿಳಾ ಅಧ್ಯಯನ, ಅಂಕಣಬರಹಗಳಲ್ಲಿ ಕವಲೊಡೆದ ಅವರ ಬರಹಗಳ ಆಕರ್ಷಕ ಶೈಲಿಯು ಅಪಾರ ಓದುಗರನ್ನು ಸೆಳೆದಿದೆ. ಅವರೊಂದಿಗೆ ಅವರ ಮನೆಯಲ್ಲಿ ನಡೆಸಿದ ಸುದೀರ್ಘ ಮಾತುಕತೆಯ ಈ ಆಯ್ದ ಭಾಗಗಳಲ್ಲಿ ಅವರ ಬರಹ, ಬದುಕು, ಜೀವನದೃಷ್ಟಿಯ ವಿಚಾರಗಳು ಮುಂದಿನ ಪುಟಗಳಲ್ಲಿವೆ.

